doc-385
Tip-2

(1)

Reg B G No.155 7 - 10 - 1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಜಾಹಿರಾತುಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಸ್ಥಾಪಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನಿವೃತ್ತ ಅಧಿಕಾರಿಗಳಿಗೆ ಪಿಂಚಣಿ ವೇತನ ಏರಿಕೆ?

ಆದ ಯುದ್ಧಗಳು

ಕಳೆದ 5560 ವರ್ಷಗಳಲ್ಲಿ 14531 ಯುದ್ಧಗಳಾಗಿವೆ ಎಂದು ಕಂಪ್ಯೂಟರು ಸಹಾಯದಿಂದ ಒಬ್ಬ ನಾರ್ವೆ ಪ್ರಾಧ್ಯಾಪಕರು ಲೆಕ್ಕಹಾಕಿದ್ದಾರೆ.

●

ಕೊಲೆ ಕಾರಣ

ಕಂಚಕಾರ್ಲಹಳ್ಳಿಯಲ್ಲಿ ಆದ ಹರಿಜನ ಚನ್ನರಾಮಯ್ಯನ ಕೊಲೆ ಹರಿಜನರ ಎರಡು ವಿರೋಧ ಗುಂಪಿನಲ್ಲಿ ಆದ ಹೊಡೆದಾಟದಿಂದ ಎಂದು ಹೈದರಾಬಾದು ವಾರ್ತೆ ತಿಳಿಸುತ್ತದೆ.

★

ವಜ್ರ ಸಿಕ್ಕುವುದು

ಹೈದರಾಬಾದಿನಿಂದ ಬಂದಿರುವ ವರ್ತಮಾನ ಪ್ರಕಾರ, ಆಂಧ್ರದ ಕಡಪಾ ಭಾಗದಲ್ಲಿ ವಜ್ರ ಹೇರಳವಾಗಿ ಸಿಕ್ಕುವುದೆಂದು, ಆ ಭಾಗದಲ್ಲಿ ಶೋಧಿಸಬೇಕೆಂದೂ ಡಾ॥ ಸಿ. ವಿ. ರಾವ್ ಹೇಳಿದರು.

⊙

ಸ್ಪೀಕರ್ ಸ್ಥಳಹೆ

ದಕ್ಷಿಣದಲ್ಲಿ ಸಂಸತ್ತಿನ ಅಧಿವೇಶನ ನಡೆಸುವುದು ಭಾವೈಕ್ಯತೆಗೆ ಒಳ್ಳೆಯದೆಂದು ಲೋಕಸಭೆಯ ಸ್ಪೀಕರ್ ಶ್ರೀ ಎನ್. ಸಂಜೀವರೆಡ್ಡಿಯವರು ತಿರುವೇಂದ್ರಂನಲ್ಲಿ ತಿಳಿಸಿದರು.

★

ಪ್ರಪ್ರಥಮ ಉತ್ಸವ

ಶಿವಮೊಗ್ಗದಲ್ಲಿ ಪ್ರಪ್ರಥಮ ಫಿಲ್ಮ್ ಫೇರ್ ಉತ್ಸವವು ಇತ್ತೀಚೆಗೆ ನಡೆದು 10 ಚಿತ್ರಗಳಿಗೆ ಬಹುಮಾನಗಳನ್ನು ಚಲನಚಿತ್ರ ಚಿಕ್ಕ ಹುಡುಗಿಯರು ಮೆರವಣಿಗೆ ಮಾಡಿದರು.

○ ದಾವಣಗೆರೆಯಲ್ಲಿ 3 ಸ್ಥಾವಿಧ ಕಾಲೇಜಿನ ವಿದ್ಯಾರ್ಥಿಗಳು ಗಾಂಧಿ ಜಯಂತಿಯಂದು ಮೆರವಣಿಗೆ ಮಾಡಿದರು.

ನವ ದೆಹಲಿಯಿಂದ ಬಂದ ವಾರ್ತೆಯ ಪ್ರಕಾರ, ನಿವೃತ್ತ ಸರ್ಕಾರಿ ನೌಕರರ ವಿರಾಮ ವೇತನ ಹೆಚ್ಚಿಸುವ ಮತ್ತು ತುಟ್ಟಿ ಭತ್ಯೆ ಕೊಡುವ ವಿಚಾರ ಭಾರತ ಸರ್ಕಾರ ಪರಿಶೀಲಿಸುತ್ತಿದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಬೇಡಿಕೆ ಇತ್ತು.

★

ವಿದ್ಯುತ್ ಪಂಪುಗಳ ಸರಬರಾಜು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೂವರೆ ಸಾವಿರ ಪಂಪ್ ಸೆಟ್‌ಗಳನ್ನು ಹಾಕುವುದಕ್ಕೆ ವಿದ್ಯುತ್ ಸರಬರಾಜು ಮಾಡಲಾಗುವುದೆಂದು ವಿಹಾರ ಇಲಾಖೆ ಸಹಾಯ ಮಂತ್ರಿ ಶ್ರೀ ವಿಠಲದಾಸ ಕೆಟ್ಟಿಯವರು ಮಂಗಳೂರಿನಲ್ಲಿ ತಿಳಿಸಿದರು.

★

ಶಿಲಾ ಸ್ತೂಪ

ಗಾಂಧಿ ಶತಮಾನ ಸಮಾರಂಭ ಸಂದರ್ಭದಲ್ಲಿ ವಿಜಯವಾಡಾದಲ್ಲಿ ರಾಷ್ಟ್ರಪತಿ ಡಾ॥ ಜಾಕೀರ್ ಹುಸೇನರು 52 ಅಡಿಗಳ ಎತ್ತರದ ಕೆಂಪು ಶಿಲೆಯ ಸ್ತೂಪವನ್ನು ಅನಾವರಣ ಮಾಡಿದರು.

●

ಭೂಮಿ ಕೆಳಗೆ ವಾಸ

ಹ್ಯಾಂಬರ್ಗಿನಿಂದ ಬಂದಿರುವ ವಾರ್ತೆ ಪ್ರಕಾರ, ಉತ್ತರ ಜಪಾನ್ ತೀರಪ್ರದೇಶದಲ್ಲಿ ಬರ್ಗಿನ ಚುಚೆಹತ್ತು ಮೀಟರುಗಳ ಕೆಳಗೆ ಭಾರಿ ಉಕ್ಕಿನ ಸಿಲಿಂಡರಿನಲ್ಲಿ ಇಬ್ಬರು ಪಶ್ಚಿಮ ಜರ್ಮನಿ ವಿಜ್ಞಾನಿಗಳು 11 ದಿನ 27 ಘಂಟೆ ಕಳೆದು ಹೊರಬಂದರು.

○

ಧ್ವಜ ಪ್ರದರ್ಶನ

ಮುಂದಿನ ವಾರ ಮೆಕ್ಸಿಕೋ ನಗರಕ್ಕೆ ಕಳುಹಿಸಲ್ಪಡುವ ಮತ್ತು 1964 ರ ಟೋಕಿಯೋ ಕ್ರೀಡಾ ಕಾಲದಿಂದಿದ್ದ ಒಲಂಪಿಕ್ ಧ್ವಜವನ್ನು ಈಗ ಪ್ರದರ್ಶನ ಮಾಡಲಾಗಿದೆ ಎಂದು ಟೋಕಿಯೋ ವಾರ್ತೆ ತಿಳಿಸುತ್ತದೆ.

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಜೋಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ತೆಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿದ್ದಾರೆ.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ

ರೇಷ್ಮೆ ಮೇಲೆ ತೆರಿಗೆ

ಗಿರಣಿಯಲ್ಲಿ ತಯಾರಾದ ಶುದ್ಧ ರೇಷ್ಮೆ ಮೇಲೆ ಕೇರಳದಲ್ಲಿ ಶೇಕಡ 3 ತೆರಿಗೆ ವಿಧಿಸಲಾಗುವುದು.

ಜೈಲಿನಿಂದ ಪರಾರಿ

ಮಧುಗಿರಿ ಜೈಲಿನಲ್ಲಿದ್ದ ತಿಮ್ಮಪ್ಪ ನೆಂಬ ಖೈದಿ ಕಕ್ಕಸ್ಸಿಗೆ ಹೋಗುವುದಾಗಿ ತಿಳಿಸಿ ಪರಾರಿ ಆದನು.

ಲಂಬಾಣಿಯ ಸಾವು

ಲಂಬಾಣಿಗರು ಮತ್ತು ಗ್ರಾಮಸ್ಥರಲ್ಲಿ ಹೊಡೆದಾಟವಾಗಿ ಒಬ್ಬ ಲಂಬಾಣಿ ಸತ್ತಿದ್ದಾನೆ.

ವಿನೀತರಾಗಿ ವಿನಂತಿಸಿ, ಈಡೇರುವಂದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ ‘ ಸತ್ಯವಾದಿ ’
ಚಾಮರಾಜಪುರಂ, ಮೈಸೂರು 4.

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಿಗೆ ಬ್ಯಾಂಕ್ ರೋಡ್ ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ. ಅವರಲ್ಲಿ ಸಾಫ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ಓರಿಯಂಟಲ್ ಡಾನ್ಸ್
ಶಿ
ಮೈಸೂರು ದಸರಾ ವಸ್ತುಪ್ರದರ್ಶನ ನಡೆಯುತ್ತಿರುವ
ಜೀವಣರಾಯನ ಕಟ್ಟೆಯಲ್ಲಿ
ಚಿತ್ತಾಕರ್ಷಕ ಅಮೋಘ ನರ್ತನಗಳು
ತಪ್ಪದೇ ನೋಡಿ ಆನಂದಿಸಿರಿ
ಪ್ರವೇಶಧನ : ರೂ. 1 ಮತ್ತು 50 ಪೈಸೆ

ಹಿಂದೂಗಳ ಆಚಾರ

ಸಂಗ್ರಾಹಕರು– 'ಧರ್ಮಪ್ರಚಾರನಿರತ" ಆನಂತನರಸಿಂಹಯ್ಯಂಗಾರ್

(ಮುಂದುವರಿದುದು)

— ಹಿಂದೂಗಳು ಷೋಡಶ ಸಂಸ್ಕಾರಗಳನ್ನು ಹೊಂದಬೇಕು —

ಪಂಚಭೂತಾತ್ಮಕವಾದ ಶರೀರದಲ್ಲಿರುವ ಆತ್ಮನು ಪರಮಾತ್ಮನ ಚಿಂತನೆ ಮಾಡಲು, ಬುದ್ಧಿಯು ಸನ್ಮಾರ್ಗದಲ್ಲಿ ವ್ಯವರ್ತಿಸಲು, ಇಂದ್ರಿಯಗಳ ಸ್ವೇಚ್ಛೆಯಾಗಿ ಪ್ರವರ್ತಿಸದಿರಲು ಪ್ರತಿಯೊಬ್ಬರೂ ಷೋಡಶ ಸಂಸ್ಕಾರಗಳನ್ನು ಹೊಂದಬೇಕು. ಆದರಲ್ಲಿ ದ್ವಿಜರಿಗೆ– ಆಧಾನ, ಪುಂಸ, ಸೀಮಂತ, ಜಾತ, ನಾಮಾನ್ನ ಚೌಳಕಾಃ।
ಮೌಂಜೀ, ವ್ರತಾನಿ, ಗೋದಾನ, ಸಮಾವರ್ತ, ವಿವಾಹಕಾಃ ॥

ಎಂಬ ರೀತಿಯಾಗಿ ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ ಅನ್ನಪ್ರಾಶನ, ಚೌಳ, ಉಪನಯನ, 4 ವೇದವ್ರತಗಳು, ಗೋದಾನ, ಸಮಾವರ್ತನ, ವಿವಾಹ ಮತ್ತು ಅಂತ್ಯೇಷ್ಟಿ, ಎಂಬ ಎಲ್ಲಾ ಸಂಸ್ಕಾರಗಳೂ ನಡೆಯಬೇಕು. ಮಿಕ್ಕವರಿಗೆ ಉಪನಯನ, ವೇದವ್ರತ, ಸಮಾವರ್ತನ ಸಂಸ್ಕಾರಗಳಿಲ್ಲ. ಮಿಕ್ಕವುಗಳನ್ನು ನಡೆಸಬೇಕು.

ಈ ಸಂಸ್ಕಾರಗಳು ನಡೆಸಲ್ಪಡುವುದರಿಂದ ಚಿತ್ತಶುದ್ಧಿಯುಂಟಾಗುತ್ತದೆ : ವರ್ಣಾಶ್ರಮಕ್ಕೆ ಸಂಬಂಧಪಟ್ಟ ಕರ್ಮಗಳನ್ನು ನಡೆಸಲು ಅಧಿಕಾರ ಪ್ರಾಪ್ತವಾಗುತ್ತದೆ. ಆಯಾ ಸಮಯಗಳಲ್ಲಿ ನಡೆಯುವ ದೇವತಾ ಪೂಜೆ, ಹೋಮ, ಹಿರಿಯರ ಆಶೀರ್ವಚನ ಇತ್ಯಾದಿಗಳಿಂದ ಶ್ರೇಯಸ್ಸುಂಟಾಗುತ್ತದೆ.

SHAKTI SUDHA

A Superb Tonic

Protect the Cow



ಗೋರಕ್ಷಣೆ ಮತ್ತು ಪಾಲನೆಯನ್ನೂ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Cow Slaughter should be banned Immediately

ವುಡ್‌ಲಾಂಡ್ಸ್ ಜನಭರಿತ 4ನೇ ವಾರ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಲಿಯಗಟ್ಟಲೆ ಕೂಪಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— ಜನಪ್ರಿಯ 6 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳೂನನ್ನಲ್ಲಿ ದೊರೆಯುತ್ತವೆ

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4